3. ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು): ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. (ಅನುಬಂಧ–4)

ಅಧ್ಯಕ್ಷರ ಅನುಮತಿ ಮೇರೆಗೆ

(ಅ) ವಿಷಯ: ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ತಾಲ್ಲೂಕಿನ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಸುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯ ಮಂತ್ರಿಗಳಿದ್ದಾರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಹಿರಿಯರಿದ್ದಾರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರೂ ಇದ್ದಾರೆ, ನಾಳೆ ಗಣರಾಜ್ಯೋತ್ಸವ ನಡೆಯುತ್ತಿದೆ. ಬಹುತೇಕ ಎಲ್ಲಾ ಕಡೆ ಗಣರಾಜ್ಯೋತ್ಸವಕ್ಕೆ ಹಾಗೂ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದಲ್ಲಿ ನಿಮ್ಮ ಉಸ್ತುವಾರಿ ಸಚಿವರು ಇರುತ್ತಾರೆ. ಅವರೇ ಧ್ವಜಾರೋಹಣ ಮಾಡುತ್ತಾರೆ. ಅದು ಸರಿ. ತಾಲ್ಲೂಕು ಮಟ್ಟದಲ್ಲಿ ಧ್ವಜಾರೋಹಣ ಮಾಡುವ ಬಗ್ಗೆ ನಾನು ಹೇಳುತ್ತಿಲ್ಲ. ಇದಕ್ಕೆ ತಿದ್ದುಪಡಿ ಆಗಬೇಕು. ಅದನ್ನು ನಾನು ಪ್ರಸ್ತಾಪ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಬಹುತೇಕ ಎಲ್ಲಾ ಕಡೆಗಳಲ್ಲೂ ನಡೆಯುತ್ತದೆ. ಪದ್ಧತಿ ಇರುವುದೇ ಹಾಗೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಆಕಸ್ಮಾತ್ತಾಗಿ ತಪ್ಪಾಗಿದ್ದರೆ ನಾನು ಅದನ್ನು ಆಕ್ಷೇಪಣೆ ಮಾಡುವುದಿಲ್ಲ. ಡೆಪ್ಯುಟಿ ಕಮಿಷನರ್ ಮೂಲಕ ಸೂಚನೆ ಕಳುಹಿಸಿ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಕಡೆ ತಹಶೀಲ್ದಾರ್‌ರವರು ಧ್ವಜಾರೋಹಣ ಮಾಡುತ್ತಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಬೇಕು. ಬಹುತೇಕ

ಕಡೆ ಹಾಗೆ ಇರಬಹುದು, ಕೆಲವು ಕಡೆ ಹಾಗೆ ಇಲ್ಲ. ಉದಾಹರಣೆಗೆ ನಮ್ಮ ನರಗುಂದ, ಉತ್ತರ ಕರ್ನಾಟಕದಲ್ಲಿ ಕೆಲವು ಕಡೆಗಳಲ್ಲಿ ತೊಂದರೆಯಾಗಿದೆ. ಅದಕ್ಕೋಸ್ಕರ ಈಗಲೇ ಸೂಚನೆ ಕಳುಹಿಸಬೆ ಇದ್ದರೆ ತಪ್ಪಾಗುತ್ತದೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಿಳಿಸಿ. ಇದು ಬೆಳೆದುಕೊಂಡು ಬಂದಿರತಕ್ಕಂತಹ ಸಂಪ್ರದಾಯ. ಯಾವುದೇ ಕಾರ್ಯಕ್ರಮ ಇದ್ದರೂ ತಾಲ್ಲೂಕಿನ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಬೇಕು. ಕೆಲವು ಕಡೆ ಆ ಲೋಪವಾಗಿದೆ. ನಮ್ಮ ಉಪ ಮುಖ್ಯ ಮಂತ್ರಿಗಳಿದ್ದಾರೆ ಅವರು ಸೂಚನೆ ಕೊಟ್ಟು ನಾಳೆ ಅದು ಕಾರ್ಯ ರೂಪಕ್ಕೆ ಬರುವ ಹಾಗೆ ನೋಡಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಸಾಮಾನ್ಯವಾಗಿ ಶಾಸಕರು ಧ್ವಚಾರೋಹಣ ಮಾಡುವುದಿಲ್ಲ. ಮೊದಲಿನಿಂದಲೂ ಹಾಗೆಯೇ ಇದೆ. ಅದನ್ನು ಮಾಡಬೇಕೆಂದರೆ ಕಾನೂನು ತಿದ್ದುಪಡಿ ಮಾಡಬೇಕಾಗಿದೆ. ಅಧ್ಯಕ್ಷತೆ ವಹಿಸುವ ಬಗ್ಗೆ ವ್ಯವಸ್ಥೆ ಮಾಡೋಣ. ಈಗಲೇ ಮುಖ್ಯ ಕಾರ್ಯದರ್ಶಿಗಳಿಗೆ ತಿಳಿಸಿ ಸೂಚನೆ ಕಳುಹಿಸುತ್ತೇನೆ.

(ಆ) ವಿಷಯ: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಬಗ್ಗೆ

ಶ್ರೀ ಆರಗ ಜ್ಞಾನೇಂದ್ರ : ಅನ್ ಸ್ಟಾರ್ಡ್ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದರಲ್ಲಿ ಪ್ರಿಂಟ್ ಆಗಿದೆ ಒಂದು ಉತ್ತರವೂ ಬಂದಿಲ್ಲ. ಇವತ್ತಿನ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ. ನಿನ್ನೆಯ ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ. ಹೋದ ಅಧಿವೇಶನದಲ್ಲಿ ಹಾಕಿದ್ದು ಈ ಸಾರಿ ಅಧಿವೇಶನ ಪ್ರಾರಂಭವಾದಾಗ ಬರುತ್ತವೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು ಹಾಗು ಸಂಸದೀಯ ವ್ಯವಹಾರಗಳ ಸಚಿವರು): 135 ಉತ್ತರಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ. ಸ್ಟಾರ್ಡ್ ಪ್ರಶ್ನೆಗಳ ಬಗ್ಗೆ ಉತ್ತರ ಹೇಳುವಾಗ ಒಟ್ಟು 185 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಉತ್ತರ ಒದಗಿಸಿದ್ದೇವೆಂದು ಹೇಳಿದ್ದೇವೆ. ಆದ್ದರಿಂದ 60 ಪ್ರಶ್ನೆಗಳಿಗೆ ಯಾವುದು ಉತ್ತರ ಬಂದಿಲ್ಲ ಅದನ್ನು ತಕ್ಷಣ ತಮಗೆ ಮುಟ್ಟಿಸುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರೇ, ಯಾವುದೇ ಕಾರಣಕ್ಕೆ ಯಾವುದೇ ಪ್ರಶ್ನೆಗೆ ಉತ್ತರ ಈ ಸದನದಲ್ಲಿಯೇ ಸಿಗಬೇಕು. ಆ ರೀತಿ ಮಾಡುವುದು, ಎಲ್ಲಾ ಸಚಿವರಿಗೂ ತಿಳಿಸಬೇಕು. ಇದು ನಿಮ್ಮ ಜವಾಬ್ದಾರಿ. ಕೆಲವು ಅನುಚಿತ ಪದಗಳನ್ನು ಬಳಸಿದ್ದಾರೆಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ, ಅದನ್ನು ನಾನು ನನ್ನ ಛೇಂಬರ್‌ನಲ್ಲಿ ನೋಡಿ ಅದನ್ನು ಯಾವುದನ್ನು ಕಡತದಿಂದ ತೆಗೆದು ಹಾಕಬೇಕು, ಅದನ್ನು ತೆಗೆದು ಹಾಕಿ ಪತ್ರಿಕೆಗಳವರಿಗೆ ಆ ನಂತರ ತಿಳಿಸುತ್ತೇನೆ.